# ರಾಮಾಯಣದಲ್ಲಿ ಕೆಲವು ಹಾಸ್ಯ ರಸನಿಮಿಷಗಳು

ಎಚ್.ವಿ.ನಾಗರಾಜರಾವ್

ಪ್ರಬುದ್ಧ ಹಾಸ್ಯವು ಮನಸ್ಸಿಗೆ ಸಾತ್ವಿಕ ಮುದವನ್ನೀಯುತ್ತದೆ. ಮನಸ್ಸನ್ನು ಉಲ್ಲಾಸದಲ್ಲಿಡುತ್ತದೆ. ಹೃದಯವನ್ನು ಹಗುರಮಾಡುತ್ತದೆ. ಕಷ್ಟಗಳನ್ನು ಮರೆಯಿಸಿ, ಜೀವನವನ್ನು ಚೆನ್ನಾಗಿ ಬದುಕಲು ಉತ್ಸಾಹ ಮೂಡಿಸುತ್ತದೆ.

ಭಾರತದ ಆದಿಕಾವ್ಯ ಎಂದು ಪ್ರಸಿದ್ಧವಾದ ವಾಲ್ಮೀಕಿ ರಾಮಾಯಣ ಎಲ್ಲ ರಸಗಳ ಅಭಿವ್ಯಕ್ತಿಯನ್ನು ತನ್ನೊಳಗೆ ಅಳವಡಿಸಿಕೊಂಡಿದೆ. ಇದನ್ನು ಸ್ವಯಂ ವಾಲ್ಮೀಕಿಯೇ ತಮ್ಮ ಗ್ರಂಥದಲ್ಲಿ ಹೀಗೆ ಹೇಳಿ ಕೊಂಡಿದ್ದಾರೆ:

**ರಸೈಃ ಶೃಂಗಾರಕರುಣಹಾಸ್ಯರೌದ್ರಭಯಾನಕೈಃ ।**
**ವೀರಾದಿಭಿಃ ರಸೈರ್ಯುಕ್ತಂ ಕಾವ್ಯಮೇತದಗಾಯತಾಮ್ ॥**(೧.೪.೯)

'ಶೃಂಗಾರ, ಕರುಣ, ಹಾಸ್ಯ, ರೌದ್ರ, ವೀರ ಮುಂತಾದ ರಸಗಳಿಂದ ತುಂಬಿದ ರಾಮಾಯಣವೆಂಬ ಕಾವ್ಯವನ್ನು (ಲವ ಮತ್ತು ಕುಶ ಎಂಬ ಕುಮಾರರು) ಹಾಡಿದರು.'

ಇದರಿಂದ, ರಾಮಾಯಣದಲ್ಲಿ ಹಾಸ್ಯರಸವನ್ನುಕ್ಕಿಸುವ ಕೆಲವು ಪ್ರಸಂಗಗಳು ಇವೆ ಎನ್ನುವುದು ಸ್ಪಷ್ಟ. ಕರುಣರಸ ಈ ಕಾವ್ಯದ ಪ್ರಧಾನ ರಸವಾಗಿರುವುದರಿಂದ, ಹಾಸ್ಯರಸಕ್ಕೆ ಅವಕಾಶಗಳು ಕಮ್ಮಿ. ಆದರೂ ಅಂಥ ಒಂದೆರಡು ಪ್ರಸಂಗಗಳನ್ನು ನೋಡಬಹುದು.

೧. ಚಿಕ್ಕಮ್ಮನ ಅಣತಿಯಂತೆ ಶ್ರೀರಾಮನು ಕಾಡಿಗೆ ಹೊರಟಿದ್ದಾನೆ. ಸೀತಾಲಕ್ಷ್ಮಣರು ಅನುಸರಿಸುತ್ತಿದ್ದಾರೆ. ಪ್ರಯಾಣಕ್ಕೆ ಮುಂಚೆ, ಶ್ರೀರಾಮನು ತನ್ನ ಸಂಪತ್ತನ್ನು ದಾನವಾಗಿ ಕೊಡುತ್ತಿದ್ದಾನೆ. ದೀನರು ಬಡವರು ಧನವನ್ನು ಸ್ವೀಕರಿಸಿ, ತೃಪ್ತರಾಗಿ ಹೋಗುತ್ತಿದ್ದಾರೆ.

ಅಯೋಧ್ಯೆಯಲ್ಲಿ ಆಗ ಒಬ್ಬ ಬಡ ಬ್ರಾಹ್ಮಣನಿದ್ದನು. ಅವನ ಹೆಸರು ತ್ರಿಜಟ. ಅವನಿಗೆ ಜೀವನಕ್ಕೆ ಯಾವ ವೃತ್ತಿಯೂ ಇರಲಿಲ್ಲ. ಅವನು ಮುದುಕ. ಅವನ ಹೆಂಡತಿ ತರುಣಿ. ಮನೆಯ ತುಂಬ ಮಕ್ಕಳು. ಯಾರಿಗೂ ಹೊಟ್ಟೆ ತುಂಬುವಷ್ಟು ಊಟವಿಲ್ಲ. ತ್ರಿಜಟನ ಹೆಂಡತಿಯ ಕಿವಿಗೆ ರಾಮನು ದಾನ ಕೊಡುತ್ತಿರುವ ವಾರ್ತೆ ಬಿತ್ತು. ಅವಳು ಗಂಡನನ್ನು ಪ್ರೇರೇಪಿಸಿ, "ರಾಮನ ಬಳಿಗೆ ಹೋಗಿ, ನಿನ್ನ ಮುಖವನ್ನು ತೋರಿಸು. ಅವನು ಏನನ್ನಾದರೂ ಕೊಡಬಹುದು" ಎಂದಳು. ತ್ರಿಜಟನು ಚಿಂದಿಬಟ್ಟೆಯನ್ನು ಹೊದೆದು, ರಾಮನ ಭವನದ ಹತ್ತಿರ ಬಂದ. "ರಾಮ, ನಾನು ದರಿದ್ರ, ನಿರ್ಗತಿಕ. ನನಗೆ ಮಕ್ಕಳು ಜಾಸ್ತಿ. ನನ್ನ ಕಡೆ ನೋಡು" ಎಂದು ಯಾಚಿಸಿದ.

ರಾಮನಿಗೆ ತ್ರಿಜಟನ ದುರವಸ್ಥೆಯನ್ನು ಕಂಡು ಕರುಣೆ ಉಕ್ಕಿತು. ಆದರೆ ಸ್ವಲ್ಪ ಪರಿಹಾಸ ಮಾಡೋಣ ಎಂದೂ ಮನಸ್ಸಿನಲ್ಲಿ ಯೋಚನೆ ಬಂದಿತು. " ಅಯ್ಯಾ, ಇಲ್ಲಿ ನನ್ನ ದನಗಳ ಮಂದೆ ಇದೆ, ನೋಡು. ಇಲ್ಲಿ ನಿಂತು ನಿನ್ನ ಕೋಲನ್ನು ಎಸೆ. ಅದು ಎಷ್ಟು ದೂರ ಹೋಗಿ ಬೀಳುವುದೋ ಅಲ್ಲಿಯವರೆಗೆ ನಿಂತಿರುವ ಗೋವುಗಳೆಲ್ಲ ನಿನ್ನವಾಗುತ್ತವೆ, ಪ್ರಯತ್ನಿಸು" ಎಂದು ರಾಮನು ಹೇಳಿದನು.

ತ್ರಿಜಟನು ಕಚ್ಚೆಯನ್ನು ಕಟ್ಟಿ, ಉಸಿರು ಬಿಗಿಹಿಡಿದು, ತನ್ನ ಸಮಸ್ತಶಕ್ತಿಯಿಂದ ಕೋಲನ್ನು ಎಸೆದ. ಆ ಕೋಲು ಸರಯೂ ನದಿಯ ದಡದವರೆಗೂ ಹೋಯಿತು. ರಾಮನು, "ಭೇಷ್! ಚೆನ್ನಾಗಿ ಎಸೆದೆ. ನನ್ನ ಗೋಧನವನ್ನೆಲ್ಲ ನಿನಗೆ ಕೊಟ್ಟಿದ್ದೇನೆ. ತೆಗೆದುಕೊಂಡು ಹೋಗು. ತಮಾಷೆ ಮಾಡಿದೆನೆಂದು ಕೋಪಿಸಿಕೊಳ್ಳಬೇಡ" ಎಂದು ಹೇಳಿ, ತ್ರಿಜಟನನ್ನು ಧನಿಕನನ್ನಾಗಿ ಮಾಡಿ ಕಳುಹಿಸಿಕೊಟ್ಟನು.

೨. ಸೀತಾಲಕ್ಷ್ಮಣರೊಡನೆ ಶ್ರೀರಾಮನು ಕಾಡಿನಲ್ಲಿದ್ದಾಗ ಶೂರ್ಪಣಖಿ ಅವರ ಆಶ್ರಮಕ್ಕೆ ಬಂದಳು. ಶೂರ್ಪ ಎಂದರೆ ಮೊರ. ನಖ ಎಂದರೆ ಉಗುರು. ಅವಳು ಉಗುರುಗಳನ್ನು ಎಂದೂ ಕತ್ತರಿಸುತ್ತಿರಲಿಲ್ಲ ವೇನೋ. ಅವು ಅಕ್ಕಿಯನ್ನು ಕೇರುವ ಮೊರಗಳಂತೆ ಇದ್ದವು. ರಾಮನನ್ನು ನೋಡಿದ ಕ್ಷಣದಲ್ಲಿಯೆ ಅವಳ ಮನಸ್ಸಿನಲ್ಲಿ ಆಸೆ ಹುಟ್ಟಿತು. ಯಾವ ಸಂಕೋಚವನ್ನೂ ಇಟ್ಟುಕೊಳ್ಳದೆ ನೇರವಾಗಿ ಬಂದು, "ನಿನ್ನ ಜೊತೆಯಲ್ಲಿರುವ ಈ ಹೆಣ್ಣು ನಿನಗೆ ತಕ್ಕವಳಲ್ಲ. ನಾನು ನಿನಗೆ ಅನುರೂಪವಾದ ಹೆಂಡತಿಯಾಗುತ್ತೇನೆ. ಅವಳನ್ನು ಬೇಕಾದರೆ ತಿಂದುಹಾಕುತ್ತೇನೆ. ಈಗಲೇ ನನ್ನ ಗಂಡನಾಗು" ಎಂದು ಯಾಚಿಸಿದಳು.

ರಾಮನಿಗೆ ನಗು ಬಂತು. ವನವಾಸದ ಹದಿಮೂರು ವರ್ಷಗಳನ್ನು ಅವರು ಯಾವ ಮನೋರಂಜನೆಯೂ ಇಲ್ಲದೆ ಕಳೆದಿದ್ದರು. ಈ ಸಂದರ್ಭವನ್ನು ಸ್ವಲ್ಪ ವಿನೋದಕ್ಕೆ ಬಳಸಿಕೊಳ್ಳಬೇಕು ಎನಿಸಿತು ಅವನಿಗೆ. ಮುಗುಳು ನಗುತ್ತಾ ಅವನು ಹೇಳಿದನು: "ಸುಂದರಿ, ನೀನು ಹೇಳುವುದೆಲ್ಲ ಸರಿ. ಆದರೆ ನನಗೆ ಆಗಲೇ ಮದುವೆಯಾಗಿದೆ. ಮದುವೆಯಾದವಳನ್ನು ಬಿಡಲು ಆಗದು. ಇಬ್ಬರನ್ನು ಕಟ್ಟಿಕೊಂಡರೆ, ನಿನಗೆ ಸವತಿಯ ಕಾಟ ತಪ್ಪಿದ್ದಲ್ಲ. ಆದ್ದರಿಂದ ಒಂದು ಒಳ್ಳೆಯ ಸಲಹೆಯನ್ನು ಕೊಡುತ್ತೇನೆ. ಇಲ್ಲೇ ನನ್ನ ತಮ್ಮ ಇದ್ದಾನೆ ನೋಡು. ಅವನಿಗೆ ಹೆಂಡತಿ ಇಲ್ಲ. ಅವನು ನಿಶ್ಚಿತವಾಗಿ ನಿನ್ನನ್ನು ಇಷ್ಟಪಡುತ್ತಾನೆ. ಅವನನ್ನು ಕೇಳು. ನಿನ್ನ ಇಷ್ಟಾರ್ಥ ಈಡೇರುತ್ತದೆ."

ಈ ಮಾತನ್ನು ಕೇಳಿದ ಶೂರ್ಪಣಖಿ ಲಕ್ಷ್ಮಣನ ಕಡೆ ನೋಡಿದಳು. ರಾಮ ಸ್ವಲ್ಪ ಕಪ್ಪು. ಲಕ್ಷ್ಮಣ ಹೊಂಬಣ್ಣದ ಕಾಂತಿಯಿಂದ ಮಿಂಚುತ್ತಿದ್ದ. ಅವನೇ ಏಕಾಗಬಾರದು ಎಂದುಕೊಂಡು, ಅವಳು ಅವನಲ್ಲಿಗೆ ಹೋಗಿ ಯಾಚಿಸಿದಳು. ಲಕ್ಷ್ಮಣನಿಗೆ ರಾಮನ ಆಟ ಅರ್ಥವಾಗಿತ್ತು. ಅದನ್ನು ಮುಂದುವರಿಸಲು, ಅವನು "ನೀನು ಹೇಳುವುದು ಯುಕ್ತವೇ. ಆದರೆ ನಾನು ರಾಮನ ದಾಸ. ನನ್ನನ್ನು ನೀನು ವರಿಸಿದರೆ ನೀನು ದಾಸನ ಪತ್ನಿಯಾಗಿ, ರಾಮಸೀತೆಯರ ಸೇವೆಯನ್ನು ಮಾಡಬೇಕಾಗುತ್ತದೆ. ನಿನ್ನಂಥ ಸುಂದರಿಗೆ ಅದು ಸರಿಯಲ್ಲ. ರಾಮನಿಗೆ ನೀನು ಚಿಕ್ಕ ಹೆಂಡತಿಯಾಗು. ಅವನನ್ನೇ ಒತ್ತಾಯಿಸಿ ಕೇಳಿಕೋ. ಅವನು ಒಪ್ಪಿ ಕೊಳ್ಳುತ್ತಾನೆ" ಎಂದು ಹೇಳಿದ. ಶೂರ್ಪಣಖಿ ಮತ್ತೆ ರಾಮನ ಬಳಿ ಬಂದು, "ನೀನೇ ನನಗೆ ಸರಿಯಾದ ಗಂಡ. ಬಾ ನನ್ನೊಡನೆ" ಎನ್ನುತ್ತಾ ಒತ್ತಾಯಿಸಿದಳು.

"ಲಕ್ಷ್ಮಣ ಸುಮ್ಮನೆ ಹಾಗೆ ಹೇಳಿದ ಅಷ್ಟೆ. ಅವನು ನನ್ನ ತಮ್ಮ, ದಾಸನಲ್ಲ. ಮತ್ತೆ ಹೋಗಿ ಕೇಳಿಕೋ, ಅವನೇ ನಿನ್ನ ಕೈಯನ್ನು ಹಿಡಿಯುತ್ತಾನೆ. ಯೋಚಿಸಬೇಡ, ಹೋಗು" ಎಂದು ರಾಮನು ಮತ್ತೆ ಅವಳನ್ನು ಲಕ್ಷ್ಮಣನ ಬಳಿಗೆ ಕಳುಹಿಸಿದ. ಐದಾರು ಬಾರಿ ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಅಲೆದ ಮೇಲೆ, ಶೂರ್ಪಣಖಿಗೆ ಸಿಟ್ಟು ಬಂತು. ಈ ಸೀತೆ ಇದ್ದರಲ್ಲವೆ ತಾಪತ್ರಯ ಎಂದು ಯೋಚಿಸಿ, ಅವಳನ್ನು ತಿಂದುಹಾಕಲು ಶೂರ್ಪಣಖಿ ನುಗ್ಗಿದಳು. ಪರಿಹಾಸ ಸಾಕು ಎಂದ ರಾಮನು ಅವಳಿಗೆ ಶಿಕ್ಷೆಯನ್ನು ನೀಡಲು ಲಕ್ಷ್ಮಣನಿಗೆ

ಹೇಳಿದಾಗ, ಅವಳನ್ನು ಹಿಡಿದು, ಕಿವಿಮೂಗುಗಳ ತುದಿಗಳನ್ನು ಕೊಯ್ದು ಓಡಿಸಿದನು.

೩. ಹನುಮಂತ ಲಂಕೆಗೆ ಹೋಗಿ, ಸೀತೆಯನ್ನು ಹುಡುಕುತ್ತಿದ್ದನು. ಅಲ್ಲಿ ಇಲ್ಲಿ ಹುಡುಕಿದ ಮೇಲೆ, ರಾವಣನ ಅಂತಃಪುರದೊಳಗೆ ಹೋಗಿ ಏಕೆ ನೋಡಬಾರದು ಎನಿಸಿತು ಅವನಿಗೆ. ಸೂಕ್ಷ್ಮರೂಪದಿಂದ ಒಳಕ್ಕೆ ಹೋದ. ಅಲ್ಲಿ ದೊಡ್ಡ ಮಂಚದ ಮೇಲೆ ರಾವಣನು ಹಾಯಾಗಿ ಮಲಗಿ ಗೊರಕೆ ಹೊಡೆಯುತ್ತಿದ್ದ. ಅಲ್ಲಿ ಅನೇಕ ಜನ ಹೆಂಗಸರಿದ್ದರು. ಅವರಲ್ಲಿ ಒಬ್ಬಳು ಸೀತೆ ಇರಬಹುದು ಎಂದು ಅವನಿಗೆ ಅನ್ನಿಸಿತಂತೆ. ಸಂತೋಷವನ್ನು ತಡೆಯಲಾಗಲಿಲ್ಲ. ಎಷ್ಟಾದರೂ ಅವನು ಕಪಿಯಲ್ಲವೆ? ವಾಲ್ಮೀಕಿ ಅವನು ಸಂತೋಷಪಟ್ಟ ಬಗೆಯನ್ನು ಹೀಗೆ ವರ್ಣಿಸುತ್ತಾನೆ:

**ಆಸ್ಫೋಟಯಾಮಾಸ ಚುಚುಂಬ ಪುಚ್ಛಂ**
**ನನಂದ ಚಿಕ್ರೀಡ ಜಗೌ ಜಗಾಮ ।**
**ಸ್ತಂಭಾನರೋಹತ್ ನಿಪಪಾತ ಭೂಮೌ**
**ನಿದರ್ಶಯನ್ ಸ್ವಾಂ ಪ್ರಕೃತಿಂ ಕಪೀನಾಂ ॥**

"ಮೇಲಕ್ಕೆರಗಿದ, ತನ್ನ ಬಾಲವನ್ನು ಹಿಡಿದುಕೊಂಡು ಅದಕ್ಕೇ ಮತ್ತೆ ಮತ್ತೆ ಮುತ್ತುಕೊಟ್ಟ. ಖುಷಿಯಿಂದ ಇಲ್ಲಿ ಅಲ್ಲಿ ನೆಗೆದು ಆಟವಾಡಿದ. ಕಂಬಗಳ ಮೇಲಕ್ಕೆ ಹತ್ತಿ ಕೆಳಗೆ ಧುಮುಕಿದ. ಭೂಮಿಯಲ್ಲಿ ಹೊರಳಾಡಿದ. ಅವನ ಆನಂದಕ್ಕೆ ಪಾರವೇ ಇರಲಿಲ್ಲ!– ತನ್ನ ಕಪಿಬುದ್ಧಿಗೆ ಪ್ರತ್ಯಕ್ಷ ಉದಾಹರಣೆಯೋ ಎಂಬಂತೆ ಹನುಮಂತನು ಹೀಗೆ ವರ್ತಿಸಿದನು."

ಆಮೇಲೆ ಅವನಿಗೆ ಯೋಚನೆ ಬಂತು. ಇವಳು ಸೀತೆಯಾದರೆ ಇಲ್ಲಿರುತ್ತಾಳೆಯೇ? ನನಗೇಕೆ ಬುದ್ಧಿ ಮಂಕಾಯಿತು? ನಾನೆಂಥ ಪೆದ್ದ ಎಂದು ಹೇಳಿಕೊಂಡು, "ನಾನಿಷ್ಟು ಅವಾಂತರ ಮಾಡಿದರೂ ಯಾರೂ ಸದ್ಯ ಏಳಲಿಲ್ಲವಲ್ಲ. ಅದೇ ಪುಣ್ಯ" ಎಂದುಕೊಂಡು, ಅಂತಃಪುರದಿಂದ ಹೊರಗೆ ಬಂದು, ಮತ್ತೆ ಸೀತೆಯನ್ನು ಹುಡುಕಲು ಹೊರಟ.

೪. ಸೀತಾನ್ವೇಷಣೆಯನ್ನು ಮಾಡಿ ಲಂಕಾಪಟ್ಟಣವನ್ನು ಸುಟ್ಟು ಹನುಮಂತ ಹಿಂದಿರುಗಿ ಬಂದ. ಕಪಿಗಳಿಗೆಲ್ಲ ವಿಷಯ ತಿಳಿಯಿತು. ಸಂತೋಷದಿಂದ ಎಲ್ಲರೂ ಕಿಷ್ಕಿಂಧೆಯ ಕಡೆಗೆ ಬಂದರು. ಊರಿನ ಹೊರಗೆ, ಮಧುವನ ಎಂಬ ತೋಟವಿತ್ತು. ಅದು ರಾಜ ಸುಗ್ರೀವನ ವಿಹಾರಕ್ಕೆ ಮೀಸಲಾಗಿತ್ತು. ಕಪಿಗಳಿಗೆ ಅಲ್ಲಿ ಪ್ರವೇಶವೇ ಇರಲಿಲ್ಲ. ಅದನ್ನು ದಧಿಮುಖ ಎಂಬ ವಾನರನು ನೋಡಿಕೊಳ್ಳುತ್ತಿದ್ದ. ಎಷ್ಟೇ ಆಸೆ ಪಟ್ಟಿದ್ದರೂ ಇತರ ಕಪಿಗಳು ಆ ಉದ್ಯಾನದೊಳಗೆ ಕಾಲಿಡುವಂತಿರಲಿಲ್ಲ. ಈಗ ಸೀತೆಯನ್ನು ಹುಡುಕಿಕೊಂಡು ಬಂದ ಕಪಿಗಳಿಗೆ ಧೈರ್ಯವೋ ಧೈರ್ಯ. ಹೇಳದೆ ಕೇಳದೆ, ಎಲ್ಲರೂ ಮಧುವನದೊಳಕ್ಕೆ ನುಗ್ಗಿದರು. ಅಡ್ಡ ಬಂದ ದಧಿಮುಖನನ್ನು ತಳ್ಳಿ ಇಷ್ಟ ಬಂದ ಮರಗಳನ್ನೇರಿದರು. ಸಿಕ್ಕಿದ ಹಣ್ಣುಗಳನ್ನೆಲ್ಲ ತಿಂದರು. ಅಲ್ಲಿದ್ದ ಜೇನುತುಪ್ಪವನ್ನು ನೆಕ್ಕಿದರು. ದಧಿಮುಖ ಕಕ್ಕಾಬಿಕ್ಕಿಯಾದ. ಆಗ ಅಲ್ಲಿನ ದೃಶ್ಯ ಹೀಗಿತ್ತು:

**ಗಾಯಂತಿ ಕೇಚಿತ್ ಪ್ರಹಸಂತಿ ಕೇಚಿತ್**
**ನೃತ್ಯಂತಿ ಕೇಚಿತ್ ಪ್ರಣಮಂತಿ ಕೇಚಿತ್**
**ಪತಂತಿ ಕೇಚಿತ್ ಪ್ರಚರಂತಿ ಕೇಚಿತ್**
**ಪ್ಲವಂತಿ ಕೇಚಿತ್ ಪ್ರಲಪಂತಿ ಕೇಚಿತ್**

"ಕೆಲವರು ಹಾಡಿದರು. ಕೆಲವರು ಜೋರಾಗಿ ನಕ್ಕರು. ಕೆಲವರು ಕುಣಿದರು, ಕೆಲವರು ಪರಸ್ಪರ ನಮಸ್ಕಾರ ಮಾಡಿದರು. ಕೆಲವರು ಬಿದ್ದು ಉರುಳಾಡಿದರು. ಕೆಲವರು ಓಡಾಡಿದರು. ಕೆಲವರು ತೆವಳಿದರು. ಇನ್ನು ಕೆಲವರು ಏನೇನೋ ಹರಟೆ ಹೊಡೆದರು."

ಯಾರೂ ಸುಮ್ಮನೆ ಇರಲಿಲ್ಲ. ನೆಗೆದದ್ದೂ ನೆಗೆದದ್ದೇ, ಬಿದ್ದದ್ದೂ ಬಿದ್ದದ್ದೇ. ತಡೆಯಲು ಬಂದ ದಧಿಮುಖನ ಬಾಲವನ್ನು ಎಳೆದು ನಕ್ಕರು. ಅವನ ಎಚ್ಚರಿಕೆಯನ್ನು ಯಾರೂ ಲೆಕ್ಕಕ್ಕೇ ತೆಗೆದುಕೊಳ್ಳಲಿಲ್ಲ.

ದಧಿಮುಖ ಓಡಿಹೋಗಿ, ಸುಗ್ರೀವನಿಗೆ ದೂರು ಹೇಳಿದ. ಸುಗ್ರೀವನಿಗೆ ಅರ್ಥವಾಯಿತು. ಕಪಿಗಳು ಹೀಗೆ ಮಾಡುತ್ತಿರಬೇಕಾದರೆ, ಸೀತೆಯನ್ನು ಕಂಡುಬಂದಿರಬೇಕು. ಅವನು ಎಲ್ಲರನ್ನೂ ಕ್ಷಮಿಸಿ, "ಅವರೇನು ಬೇಕಾದರೂ ಮಾಡಿಕೊಳ್ಳಲಿ. ನೀನು ತಲೆ ಕೆಡಿಸಿಕೊಳ್ಳಬೇಡ" ಎಂದು ದಧಿಮುಖನಿಗೆ ಹೇಳಿದನು.

೫. ರಾಮಾಯಣದಲ್ಲಿ ಇಲ್ಲದಿದ್ದರೂ ಅದರ ಕಥೆಯನ್ನು ಆಧಾರವಾಗಿ ಇಟ್ಟುಕೊಂಡು, ಕವಿಯೊಬ್ಬನು ಸೃಷ್ಟಿಸಿದ ಹಾಸ್ಯಸಂದರ್ಭ ಒಂದು ಇದೆ. ಶ್ರೀರಾಮನ ಪಾದಸ್ಪರ್ಶದಿಂದ ಕಲ್ಲು ಅಹಲ್ಯೆಯಾಯಿತು ಎಂಬ ಸುದ್ದಿ ಹರಡಿತಂತೆ. ಆಗಿನ ಕಾಲದಲ್ಲಿ ಹೆಣ್ಣುಗಳಿಗೆ ಬರ. ಎಷ್ಟೋ ಜನ ಗಂಡಸರು ಹೆಣ್ಣು ಸಿಗದೆ, ಅವಿವಾಹಿತರಾಗಿ ಉಳಿದಿದ್ದರಂತೆ. ಆಗ:

**ಪಾಷಾಣಂ ಪ್ರಮದಾಂ ಕರೋತಿ ಹರಿರಿತ್ಯಾಕರ್ಣ್ಯ ಮುಗ್ಧಾ ಜನಾಃ**
**ದಾರಿದ್ರ್ಯಾದವಿವಾಹಿತಾಃ ಕತಿಪಯೇ ಕನ್ಯಾಪ್ತಿಕಾಮಾಸ್ತದಾ ।**
**ಕ್ಷಿಪ್ತ್ವಾ ಯತ್ಪದಪಂಕಜೋಪರಿ ಶಿಲಾಖಂಡಾನ್ ಪ್ರಚಕ್ರೂ ರುಜಂ**
**ತದ್ ದೃಷ್ಟ್ವೋದಿತಮಂದಹಾಸಮಧುರಃ**
**ಕ್ಷೇಮಾಯ ರಾಮೋऽಸ್ತು ನಃ ॥**

"ಕಾಲನ್ನು ಮುಟ್ಟಿಸಿ ರಾಮನು ಕಲ್ಲನ್ನು ಹೆಂಗಸಾಗಿ ಮಾಡುತ್ತಾನೆ ಎಂದು ಕೇಳಿದ ಅನೇಕ ಜನ ಮುಗ್ಧರು, ಮದುವೆಯಾಗಬೇಕೆಂದು ಆಸೆ ಪಡುತ್ತಿದ್ದವರು, ದಪ್ಪ ದಪ್ಪ ಕಲ್ಲುಗಳನ್ನು ತಂದು ರಾಮನ ಕಾಲಿನ ಬಳಿ ಇಡಲಾರಂಭಿಸಿದರು. ಅದನ್ನು ಕಂಡು ಮಧುರವಾಗಿ ಮಂದಹಾಸವನ್ನು ಬೀರುತ್ತಿರುವ ರಾಮನು ನಮ್ಮನ್ನು ಕಾಪಾಡಲಿ."

ಇದನ್ನೇ ಇನ್ನೊಬ್ಬ ಸಂಸ್ಕೃತ ಕವಿ ಗುಹನ ಮಾತಿನಲ್ಲಿ ಹೇಳಿಸಿ ನಗೆಯನ್ನು ಉಕ್ಕಿಸುತ್ತಾನೆ:

**ಕ್ಷಾಲಯಾಮಿ ತವಪಾದಪಂಕಜಂ**
**ನಾಥ ದಾರುದೃಷದೋಃ ಕಿಮಂತರಮ್ ।**
**ಮಾನುಷೀಕರಣಚೂರ್ಣಮಸ್ತಿ ತೇ**
**ಪಾದಯೋರಿತಿ ಕಥಾ ಪ್ರಥೀಯಸೀ ॥**

"ರಾಮ, ನೀನು ದೋಣಿಯನ್ನೇರುವ ಮೊದಲು ನಿನ್ನ ಕಾಲುಗಳನ್ನು ನಾನು ಚೆನ್ನಾಗಿ ತೊಳೆಯುತ್ತೇನೆ. ನಿನ್ನ ಪಾದಗಳಲ್ಲಿ ಏನನ್ನು ಬೇಕಾದರೂ ಹೆಣ್ಣನ್ನು ಮಾಡುವ ಚೂರ್ಣವಿದೆಯಂತೆ. ಕಲ್ಲಿಗೂ ಮರಕ್ಕೂ ಏನು ಮಹಾ ವ್ಯತ್ಯಾಸವಿದೆ? ನಿನ್ನ ಕಾಲಿನ ಧೂಳಿನ ಸ್ಪರ್ಶದಿಂದ ನನ್ನ ದೋಣಿ ಹೆಣ್ಣಾಗಿಬಿಟ್ಟರೆ, ನಾನೇನು ಮಾಡಲಿ? ಆದ್ದರಿಂದ, ಮೊದಲು ನಿನ್ನ ಪಾದಗಳನ್ನು ತೊಳೆಯುವ ಅವಕಾಶವನ್ನು ನನಗೆ ನೀಡು."